# ಆಡಳಿತದಲ್ಲಿ 'ರಾಜರ್ಷಿ' ಆದರ್ಶದ ಮಹತ್ವ



ಸ್ವಾಮಿ ರಂಗನಾಥಾನಂದ

**ಸುಭದ್ರ ಆಡಳಿತ ದೇಶಕ್ಕೆ ಅತ್ಯಂತ ಮುಖ್ಯವಾದುದು. ಇದು ಆಡಳಿತಗಾರರ ವ್ಯಕ್ತಿತ್ವವನ್ನು ಅವಲಂಬಿಸಿದೆ. ಅವರು ಪ್ರಭುತ್ವ ಮತ್ತು ಋಷಿತ್ವಗಳೆರಡನ್ನೂ ತಮ್ಮಲ್ಲಿ ಮೈಗೂಡಿಸಿಕೊಂಡಾಗ ಆಡಳಿತ ಸುಭದ್ರವಾಗುತ್ತದೆ ಎನ್ನುತ್ತಾರೆ ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು. ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದಾರೆ.** *Democratic Administration in the light of Practical Vedanta* **ಎಂಬ ಅವರ ಗ್ರಂಥವು 'ಅನುಷ್ಠಾನ ವೇದಾಂತದ ಬೆಳಕಿನಲ್ಲಿ ಪ್ರಜಾಸತ್ತಾತ್ಮಕ ಆಡಳಿತ' ಎಂದು ಕನ್ನಡದಲ್ಲಿ ಅನುವಾದವಾಗಿದೆ. ಅದರ ಕೆಲವು ಆಯ್ದ ಭಾಗಗಳನ್ನು ಇಲ್ಲಿ ಲೇಖನ ರೂಪದಲ್ಲಿ ಕೊಡಲಾಗಿದೆ.**

ಆಡಳಿತ ದರ್ಶನಕ್ಕೆ ಸಂಬಂಧಿಸಿದಂತೆ ಶ್ರೀಕೃಷ್ಣನು ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ಉಪಯೋಗಿಸಿದ **ರಾಜರ್ಷಿ** ಎಂಬ ಪದವು ವಿಶೇಷ ಮಹತ್ವವನ್ನು ಪಡೆಯುತ್ತದೆ. ಹಿಂದೂಗಳಲ್ಲಿ ಅನೇಕರಿಗೆ ಈ ರಾಜರ್ಷಿ ಎಂಬ ಪದವು ಚಿತ್ರವಿಚಿತ್ರ ವಿಕೃತ ಅರ್ಥಗಳನ್ನು ಕೊಡುತ್ತದೆ, ಅಸ್ಪಷ್ಟ, ಅಸ್ವಾಭಾವಿಕ ಅರ್ಥಗಳನ್ನು ಕೊಡುತ್ತದೆ. ನಮ್ಮ ಮನಸ್ಸಿನಿಂದ ಅಂತಹ ವಿಕಾರ ಭಾವನೆಗಳನ್ನು ತೆಗೆದು ಹಾಕಿದ ಮೇಲೆ ಮಾನವನ ಬದುಕಿಗೂ ಭವಿಷ್ಯತ್ತಿಗೂ ಸಂಬಂಧಿಸಿದಂತೆ ಮಹತ್ವಪೂರ್ಣವಾದ ಅರ್ಥವು ಅದಕ್ಕಿರುವುದು ನಮಗೆ ಗೋಚರಿಸುತ್ತದೆ.


## ರಾಜರ್ಷಿ ಯಾರು?

ಈ ಪದವು ಏಕಕಾಲದಲ್ಲಿ **ರಾಜನೂ** ಮತ್ತು **ಋಷಿಯೂ** ಆದ ವ್ಯಕ್ತಿಯನ್ನು ಸೂಚಿಸುತ್ತದೆ ಎಂದು ಶಂಕರಾಚಾರ್ಯರು ವಿವರಿಸುತ್ತಾರೆ. ಅದರ ಅರ್ಥವೇನು? ಕಿರೀಟಧಾರಿಗಳು ಎಂಬರ್ಥದಲ್ಲಿ, ಈಗ ಪ್ರಜಾಸತ್ತಾತ್ಮಕ ದೇಶದಲ್ಲಿ ರಾಜರಿಲ್ಲ. ಆದರೆ ರಾಜನನ್ನು ರದ್ದುಪಡಿಸುವಾಗ ರಾಜತ್ವವನ್ನೇನೂ ರದ್ದುಪಡಿಸಿಲ್ಲ. ಅದನ್ನು ಒಬ್ಬ ವಿಶಿಷ್ಟ ವ್ಯಕ್ತಿಯಿಂದ ತೆಗೆದುಕೊಂಡು ಪ್ರಜಾರಾಜ್ಯದ ಲಕ್ಷಾಂತರ ಪೌರರಿಗೆ ಹರಡಲಾಗಿದೆ ಅಷ್ಟೆ. ಪೌರರು ಪರಮಾಧಿಕಾರ ಉಳ್ಳವರೂ ಸ್ವತಂತ್ರರೂ ಆಗಿದ್ದಾರೆ. ಮೂಲಾರ್ಥದಲ್ಲಿ ರಾಜ ಎನ್ನುವುದು ಪ್ರಕಾಶಿಸುವ ವ್ಯಕ್ತಿಗೆ ಅನ್ವಯಿಸುತ್ತದೆ. ಅವನು ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಬಹು ಸಮರ್ಥನಾಗಿರುತ್ತಾನೆ. **ರಾಜತೇ** ಎಂದರೆ ಪ್ರಕಾಶಿಸುತ್ತಾನೆ, ಸಮರ್ಥನಾಗಿದ್ದಾನೆ ಎಂದು. ಅವನೊಳಗಿರುವ ದೀಪವು ಆಚ್ಛಾದಿತವಾಗಿಲ್ಲ, ಕ್ರಿಸ್ತ ಹೇಳಿದ ಹಾಗೆ ಅದು ಒಂದು ಮೋಂಬತ್ತಿಯ ಪೀಠದ ಮೇಲಿದೆ. ಸುತ್ತಮುತ್ತ ಅದು ಬೆಳಕು ಚೆಲ್ಲುತ್ತದೆ.

ಸಾಮಾನ್ಯ ಅರ್ಥದಲ್ಲಿ ತಂದೆ, ತಾಯಿ, ಶಾಲೆಯಲ್ಲಿ ಉಪಾಧ್ಯಾಯ, ವಾಸ್ತವವಾಗಿ ಎಲ್ಲಾ ಪೌರರೂ **ರಾಜರೇ**. ವಿಶೇಷ ಅರ್ಥದಲ್ಲಿ ಸಾರ್ವಜನಿಕ ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ಹೊತ್ತಿರುವವರು, ಉದ್ಯಮಪತಿ, ಆಡಳಿತಗಾರ, ಮಂತ್ರಿ, ಕಾರ್ಯನಿರ್ವಾಹಕ, ಇಂಥವರೆಲ್ಲ **ರಾಜರು**. ಏಕೆಂದರೆ ಸಹಸ್ರಾರು ಜನರ ಸಂತೋಷ, ಹಾಗೂ ಯೋಗಕ್ಷೇಮಗಳು ಅವರನ್ನು ಅವಲಂಬಿಸಿವೆ. ಅವರು ತಮ್ಮ ಅಧಿಕಾರವನ್ನೂ ಹೊಣೆಗಾರಿಕೆಯನ್ನೂ ಹೇಗೆ ನಿರ್ವಹಿಸುತ್ತಾರೆ? ಅವರಿಗೆ ಯಾವ ಬೆಳಕು, ಯಾವ ದರ್ಶನವು ದಾರಿ ತೋರಿಸುತ್ತದೆ? ಆಡಳಿತವನ್ನು ಕುರಿತ ಗೀತೆಯ ದರ್ಶನದ ತಿರುಳಾದ ಅತಿ ಮಹತ್ವದ ಪ್ರಶ್ನೆ ಇದು. ಎರಡನೆಯ ಅಂಶೋಕ್ತಿಯಾದ **ಋಷಿ** ಎಂಬುದರ ಮಹತ್ವವನ್ನು ಅದು ಬೆಳಕಿಗೆ ತರುತ್ತದೆ.

ಕುಲಸಂಬಂಧದಿಂದ ಸೀಮಿತಗೊಂಡ ವ್ಯಕ್ತಿಯು ತನ್ನ ದಾರಿಗೆ

ಬೆಳಕು ಪಡೆಯುವ ಸಾಮಾನ್ಯ ಚಿಂತನೆಯ ದೀಪದಿಂದ ಆಡಳಿತಗಾರರು ನಿರ್ದೇಶಿತರಾದ ಪಕ್ಷದಲ್ಲಿ ಅವರು ಅನೇಕ ವೇಳೆ, ತಮ್ಮ ಅಧಿಕಾರವನ್ನೂ ಸ್ಥಾನಮಾನವನ್ನೂ ಬಳಸಿಕೊಂಡು, ಸಮಾಜವನ್ನು ಬಲಿಗೊಟ್ಟು, ಸ್ವಪ್ರತಿಷ್ಠೆಯನ್ನು ಮೆರೆಯುವ ಸಾಧ್ಯತೆ ಹೆಚ್ಚು. ಇದು ಒಂದು ನರಿಯ ಕುಟಿಲತನವನ್ನು ವ್ಯಕ್ತಪಡಿಸಬಹುದೇ ಹೊರತು, ರಾಜನ ನಿಜವಾದ ಲಕ್ಷಣವಾದ ಪೌರುಷ ಅಥವಾ ವೀರತ್ವವನ್ನಲ್ಲ. ಈ ಎರಡನೆಯದಕ್ಕೆ ಸಾಮಾನ್ಯ ಹಂತವನ್ನು ಮೀರಿದ ದರ್ಶನದ



ಅಸಾಧಾರಣ ಬೆಳಕಿನ ಆಶ್ರಯ ಪಡೆಯಬೇಕಾಗುತ್ತದೆ. ಅದು ಮಾತ್ರವೆ ಚಾರಿತ್ರ್ಯ ಶುದ್ಧಿಯ ಮತ್ತು ಅರ್ಪಣಾಮನೋಭಾವದ ಶಕ್ತಿಯನ್ನು ಉತ್ಪಾದಿಸಬಲ್ಲುದು. ಅದು ಸರಳವೂ ವಿಶಾಲವೂ ಆದ ಅರ್ಥದಲ್ಲಿ ಋಷಿತ್ವದ ವೀರಲಕ್ಷಣವನ್ನು ತೋರಿಸಬಲ್ಲುದು.

## ಎಲ್ಲರೂ ರಾಜರ್ಷಿಗಳಾಗಬೇಕು

ರಾಜನ ಮತ್ತು ಋಷಿಯ ಈ ಕೂಡಿಕೆಯನ್ನು, ಪೌರುಷ ಮತ್ತು ಸಂತತ್ವಗಳ ಈ ಸಂಯೋಜನೆಯನ್ನು ಗೀತೆಯು ಸಾಮಾನ್ಯವಾಗಿ ಎಲ್ಲ ಜನರಲ್ಲೂ, ವಿಶೇಷವಾಗಿ ರಾಜಕಾರಣಿಗಳು ಮತ್ತು ಆಡಳಿತಗಾರರಲ್ಲಿ ಇರಬೇಕೆಂದು ಬಯಸುತ್ತದೆ. ಒಬ್ಬ ವ್ಯಕ್ತಿಯಲ್ಲಿ ಅಧಿಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಗಳೆರಡೂ ಕೂಡಿದಾಗ; ಮತ್ತು ಚಾರಿತ್ರ್ಯ ಶುದ್ಧಿ, ನಿರ್ಮಲವಾದ ಆಲೋಚನೆ, ಅರ್ಪಣಾಮನೋಭಾವ ಹಾಗೂ ಕಾರ್ಯಪರಿಣತಿ ಇವು ಅವೆರಡರ ಜೊತೆ ಸೇರಿದಾಗ, ಗೀತೆಯು ಹೇಳುವ ರಾಜರ್ಷಿ ಸಂಯೋಜನೆಯನ್ನು ವಿವಿಧ ಪ್ರಮಾಣದಲ್ಲಿ ಅವನು ತನ್ನಲ್ಲಿ ಉಂಟುಮಾಡಿಕೊಳ್ಳುತ್ತಾನೆ. ಜನಪ್ರೇಮದ ಶಕ್ತಿಯನ್ನು ತತ್ತ್ವಚಿಂತನೆಯ ಶಾಂತಿಯೊಂದಿಗೆ ಒಂದುಗೂಡಿಸುವುದೇ ಅದು.

ಆಧ್ಯಾತ್ಮಿಕ ಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು ಒಂದುಗೂಡಿಸಿ ಗೀತೆಯಲ್ಲಿ ಆಡಳಿತ ದರ್ಶನವನ್ನು ಬೋಧಿಸಲಾಗಿದೆ. ಚಾರಿತ್ರ್ಯ ಶುದ್ಧಿ ಹಾಗೂ ಕಾರ್ಯಸಾಮರ್ಥ್ಯಗಳನ್ನೂ, ಸಂತತ್ವ ಹಾಗೂ ಪೌರುಷಗಳ ಪರಾಕ್ರಮವನ್ನೂ ಒಂದುಗೂಡಿಸಿದ ದರ್ಶನವೊಂದನ್ನು ಮನುಷ್ಯನಿಗೆ ಅದು ನೀಡುತ್ತದೆ. ಅದು ಜನರನ್ನು, ಯಾವುದೇ ಭಾಗದ ಜನರನ್ನು ಸರ್ವತೋಮುಖ ಶ್ರೇಷ್ಠತೆಗೆ ಒಯ್ಯಬಲ್ಲುದು. ಗೀತೆಯು ತನ್ನ ಅತ್ಯಂತ ತೇಜೋಮಯವಾದ ಕೊನೆಯ ಶ್ಲೋಕದಲ್ಲಿ ಇದನ್ನು ಸ್ಥಿರಪಡಿಸುತ್ತದೆ. ನಮ್ಮ ರಾಷ್ಟ್ರೀಯ ರಾಜಕಾರಣವೂ ಆಡಳಿತವೂ ಈ ಮಹಾನ್ ಸಂದೇಶವನ್ನು ನಮ್ಮ ಪ್ರಾಚೀನ ಭಾರತದ ಆಧುನಿಕ ಮಾನವ ಬೆಳವಣಿಗೆಯ ವಿಸ್ತಾರವಾದ ಪ್ರಯೋಗಶಾಲೆಯಲ್ಲಿ ಪರೀಕ್ಷೆಗೊಡ್ಡಿ ತಾಳೆ ನೋಡತೊಡಗಬೇಕು. ರಾಷ್ಟ್ರೀಯವಾಗಿ, ಅಂತರರಾಷ್ಟ್ರೀಯವಾಗಿ ಇದಕ್ಕಿಂತ ಹೆಚ್ಚು ಸ್ಫೂರ್ತಿಯುತವೂ ಮಹತ್ತರವೂ ಆದ ಕಾರ್ಯವಿನ್ನೇನನ್ನೂ ನಮ್ಮ ಆಡಳಿತವು ಮಾಡಲಾರದು. ಇದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂಬ ಅಸ್ಪಷ್ಟ ವೈಶಿಷ್ಟ್ಯವನ್ನು ಪಡೆದಿರುವ ಭಾರತವನ್ನು ಅತ್ಯಂತ ಶ್ರೇಷ್ಠ ಪ್ರಜಾಪ್ರಭುತ್ವವನ್ನಾಗಿ ಪರಿವರ್ತಿಸುವುದು. ಇದು ಆ ಶ್ಲೋಕ:

> ಯತ್ರ ಯೋಗೇಶ್ವರಃ ಕೃಷ್ಣೋ
>     ಯತ್ರ ಪಾರ್ಥೋ ಧನುರ್ಧರಃ |
> ತತ್ರ ಶ್ರೀಃ ವಿಜಯೋ ಭೂತಿಃ
>     ಧ್ರುವಾ ನೀತಿಃ ಮತಿರ್ಮಮ ||

‘ ಎಲ್ಲೆಲ್ಲಿ ಯೋಗವಿಶಾರದನಾದ (ದರ್ಶನದ ಪ್ರಭು) ಕೃಷ್ಣನ (ಭಾವವಿದೆಯೋ), ಮತ್ತು ಎಲ್ಲೆಲ್ಲಿ ಧನುರ್ಧಾರಿಯಾದ (ಕರ್ಮಪಟು) ಅರ್ಜುನನ (ಭಾವವಿದೆಯೊ) ಅಲ್ಲೆಲ್ಲ ಸಂಪತ್ತು,

ವಿಜಯ,ಯೋಗಕ್ಷೇಮ ಮತ್ತು ಅಚಲವಾದ ನ್ಯಾಯ (ಇವು ಇರುತ್ತವೆ) ಎಂಬುದು ನನ್ನ ಧೃಢವಾದ ನಿಶ್ಚಯ.'

## ಅಧಿಕಾರದಲ್ಲಿ ಆಧ್ಯಾತ್ಮಿಕತೆ

ಋಷಿ ಎಂದರೆ ಹಿಮಾಲಯಕ್ಕೆ ಹೋಗಿ ಅಲ್ಲಿ ಒಂದು ಕಡೆ ಧ್ಯಾನಸ್ಥನಾಗಿ ಕುಳಿತುಬಿಡುವುದಲ್ಲ. ಋಷಿ ಎಂದರೆ ಆಧ್ಯಾತ್ಮಿಕವಾಗಿ ಬೆಳೆದಿರುವವನು , ಒಳಗಿರುವ ಆತ್ಮದ ಅನಂತ ಶಕ್ತಿಯ ಸ್ಪರ್ಶವನ್ನು ಅನುಭವಿಸಿರುವವನು ಎಂದರ್ಥ; ಋಷಿಯೆಂದರೆ ಮಂತ್ರದ್ರಷ್ಟಾ, ಆಧ್ಯಾತ್ಮಿಕ ಸತ್ಯಗಳನ್ನು ದರ್ಶಿಸಿರುವವನು, ಅನುಭವಿಸಿರುವವನು ಎಂದರ್ಥ. ರಾಜ ಎಂದರೆ ಕಿರೀಟ ಧರಿಸಿದ ಅರಸನೇ ಆಗಬೇಕೆಂದಿಲ್ಲ. ಅಂತಹ ರಾಜರು ಈಗ ವಿರಳವಾಗುತ್ತಿದ್ದಾರೆ. ಯಾರು ಅಧಿಕಾರವನ್ನೂ ಪ್ರಜಾಪ್ರಭುತ್ವವನ್ನೂ ಹೊಂದಿರುತ್ತಾನೆಯೋ ಅವನೇ ರಾಜ. ಆದ್ದರಿಂದ ಒಬ್ಬ ವ್ಯಕ್ತಿಯು ಅಧಿಕಾರದೊಂದಿಗೆ ಆಧ್ಯಾತ್ಮಿಕ ಅಂತರ್ಮುಖತೆಯನ್ನು, ಪ್ರಭುತ್ವದೊಂದಿಗೆ ನೈತಿಕ ಮತ್ತು ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ಹೊಣೆಗಾರಿಕೆ ಇವುಗಳನ್ನು ಜೊತೆಗೂಡಿಸಿಕೊಂಡಿರುತ್ತಾನೊ ಅವನು ರಾಜರ್ಷಿಯಾಗುತ್ತಾನೆ. ರಾಜರ್ಷಿಯ ಶ್ರೇಷ್ಠತೆಯು ಕಾರ್ಯಸಾಮರ್ಥ್ಯ ಮತ್ತು ನೈತಿಕ ಸಾಮರ್ಥ್ಯಗಳು ಜೊತೆಗೂಡಿದುದರ ಫಲ. ಮಾನವನ ಮನೋಬಲವನ್ನು ಅವನ ಜೀವನ ಮತ್ತು ಕಾರ್ಯಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಮೂಲಕ ಬುದ್ಧಿಯಾಗಿ ಬೆಳೆಸುವುದರಿಂದ ಇದನ್ನು ಸಾಧಿಸಬಹುದು.

ಅಧಿಕಾರವು ಮಾನವೀಯ ಒಲವನ್ನು ಪಡೆದಿದ್ದೇ ಆದಲ್ಲಿ, ಅದು ಆಧ್ಯಾತ್ಮಿಕವಾಗುತ್ತದೆ. ಅಂತಹ ಅಧಿಕಾರವನ್ನು ನಿರ್ವಹಿಸುವವನು ಸಾಮಾಜಿಕ ಒಲವುಳ್ಳ ಇಚ್ಛೆಯಿರುವ ಆಧ್ಯಾತ್ಮಿಕ ವ್ಯಕ್ತಿಯಾಗುತ್ತಾನೆ. ಅವನು ಯಾವುದೇ ದೇವಾಲಯಕ್ಕಾಗಲಿ, ಚರ್ಚಿಗಾಗಲಿ ಅಥವಾ ಮಸೀದಿಗಾಗಲಿ ಹೋಗದಿರಬಹುದು; ಯಾವುದೇ ಪವಿತ್ರವಾದ ನದಿಯಲ್ಲಿ ಸ್ನಾನ ಮಾಡದಿರಬಹುದು; ಯಾವುದೇ ಯಜ್ಞ-ಯಾಗ ಮಾಡದಿರಬಹುದು; ಆದರೆ ಅವನು ಆಧ್ಯಾತ್ಮಿಕವಾಗಿ ಬೆಳೆದಿರುತ್ತಾನೆ. ಆ ಬೆಳವಣಿಗೆಯಿಂದ ಒಂದು ನೂತನ ಶಕ್ತಿಮೂಲವು ಲಭ್ಯವಾಗುತ್ತದೆ. ಅದರಿಂದ ಸಣ್ಣದೋ ದೊಡ್ಡದೋ ಆಮಿಷವನ್ನು ಗೆದ್ದು ಪ್ರಾಮಾಣಿಕತೆ, ನ್ಯಾಯ ಮತ್ತು ಸೇವಾಸಮರ್ಪಣೆಗಳ ಪಥದಲ್ಲಿ ಸ್ಥಿರವಾಗಿ ನಿಲ್ಲಲು ಸಹಾಯಕವಾಗುತ್ತದೆ.

## ಸಮತ್ವವೇ ಯೋಗ

ಗೀತೆಯು ಯೋಗದ ಆದರ್ಶವನ್ನು, ಸಮಗ್ರ ಆಧ್ಯಾತ್ಮಿಕತೆಯ ತಂತ್ರವನ್ನು ಸಮತ್ವಂ, 'ಸಮಚಿತ್ತತೆ',ಭಾವನಾ ಸಮತೋಲನ ಎಂದೂ ಕರ್ಮಸು ಕೌಶಲಂ, ಕಾರ್ಯಚಟುವಟಿಕೆಗಳಲ್ಲಿ ಕ್ಷಮತೆ, ಕೌಶಲ ಎಂದೂ ವರ್ಣಿಸುತ್ತದೆ. ಅದು ಇಮ್ಮಡಿಯಾದ ಪಟುತ್ವ: ಬಹಿರಂಗದಲ್ಲಿಉತ್ಪಾದಕ ಸಾಮಾಜಿಕ ಸಾಮರ್ಥ್ಯ- ರಾಜ ಅಂಶ; ಅಂತರಂಗದಲ್ಲಿ ವೈಯಕ್ತಿಕ ಆಧ್ಯಾತ್ಮಿಕ ಪಟುತ್ವ – ಋಷಿ ಅಂಶ. ಇವೆರಡೂ ಕೂಡಿದ್ದೇ ರಾಜರ್ಷಿ ಕಲ್ಪನೆ. ಪ್ರತಿಯೊಬ್ಬ ಕೆಲಸಗಾರನನ್ನೂ ರಾಜರ್ಷಿಯನ್ನಾಗಿ ಮಾಡುವ ಯೋಗವಿದು- ಆಡಳಿತಗಾರ, ಸಾಮಾನ್ಯ ಕುಶಲ ಕಾರ್ಮಿಕ, ಗೃಹಿಣಿ ಹೀಗೆ ಎಲ್ಲರಿಗೂ ಇದು ಅನ್ವಯವಾಗುತ್ತದೆ. ಭೌತಪ್ರಕೃತಿಯ ಶಕ್ತಿಗಳನ್ನು ಪಳಗಿಸಿ ರಚನಾತ್ಮಕವಾಗಿ ಉಪಯೋಗಿಸುವುದೇ ನಾಗರೀಕತೆ; ಮನುಷ್ಯನ ಶಕ್ತಿಗಳನ್ನು ಪಳಗಿಸಿ ರಚನಾತ್ಮಕವಾಗಿ ಉಪಯೋಗಿಸುವುದೇ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ.

**ಭೌತಪ್ರಕೃತಿಯ ಶಕ್ತಿಗಳನ್ನು ಪಳಗಿಸಿ ರಚನಾತ್ಮಕವಾಗಿ ಉಪಯೋಗಿಸುವುದೇ ನಾಗರಿಕತೆ; ಮನುಷ್ಯನ ಶಕ್ತಿಗಳನ್ನು ಪಳಗಿಸಿ ರಚನಾತ್ಮಕವಾಗಿ ಉಪಯೋಗಿಸುವುದೇ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ.**

## ಮದ-ದಮ

ಅನೇಕ ವೇಳೆ ಒಬ್ಬ ವ್ಯಕ್ತಿಗೆ ಅಧಿಕಾರ ಬಂದಾಗ ಅದನ್ನು ಹೇಗೆ ಅರಗಿಸಿಕೊಳ್ಳಬೇಕೆಂದು ಅವನಿಗೆ ತಿಳಿದಿರುವುದಿಲ್ಲ. ಅದನ್ನು ಮಾನವನ ಒಳಿತಿಗಾಗಿ ಹೇಗೆ ಬಳಸಬೇಕೆಂಬುದೂ ತಿಳಿದಿರುವುದಿಲ್ಲ. ಅದರಿಂದ ಅವನು ಮತ್ತಿಗೊಳಗಾಗುತ್ತಾನೆ – ಮಧು ಅಥವಾ ಸುರೆಯನ್ನು ಸೇವಿಸಿ ಅಮಲೇರುವಂತೆ. ಅಮಲಿಗೆ ಸಂಸ್ಕೃತದ ಪದ ಮದ ಎಂಬುದು. ಅದನ್ನು ಹಿಂದುಮುಂದು ಮಾಡಬೇಕು, ದಮವಾಗಿ ಪರಿವರ್ತಿಸಬೇಕು ಎಂದು ಮಹಾಭಾರತವು ಹೇಳುತ್ತದೆ. ಪೂರ್ಣಆತ್ಮನಿಗ್ರಹ ಮತ್ತು ಸ್ವ-ನಿಯಂತ್ರಣವೇ ದಮ.

ಈ ದಮ (ಇಂದ್ರಿಯ ಶಕ್ತಿಯನ್ನು ಪೂರ್ಣವಾಗಿ ರೂಢಿಸಿಕೊಳ್ಳುವುದು, ಮದ ಅಥವಾ ಅಮಲಿನ ವಿರುದ್ಧವಾದದ್ದು), ಅದರ ಸೋದರಿ ಸಾಧನೆಯಾದ ಶಮ (ಮಾನಸಿಕ ಶಕ್ತಿಯ ನಿಯಂತ್ರಣ) ಇವೆರಡೂ ಸೇರಿ ಮಾನವನ ನೈತಿಕ ಸಾಧನೆಯಾಗುತ್ತವೆ. ಪ್ರತಿಯೊಂದು ಭಾರತೀಯ ಧರ್ಮವೂ ದರ್ಶನವೂ ಇದನ್ನು ಒಪ್ಪುತ್ತದೆ.

## ಚಾರಿತ್ರ್ಯಪಟುತ್ವ

ಎಲ್ಲ ಮದವನ್ನೂ ದಮವಾಗಿ ಪರಿವರ್ತಿಸುವ ತಂತ್ರವನ್ನು ಗೀತೆಯು ವರ್ಣಿಸುತ್ತದೆ. ತನ್ನಲ್ಲಿ ಅಂತರ್ಗತವಾಗಿರುವ ಆಧ್ಯಾತ್ಮಿಕ ಶಕ್ತಿಮೂಲಗಳನ್ನು ಸ್ಥಿರಗತಿಯಲ್ಲಿ ಬಿಡಿಸಿ ಹೊರಸೆಳೆಯುವ ಮೂಲಕ ಅದನ್ನು ಸಾಧಿಸಬಹುದು. ಈ ತಂತ್ರವನ್ನು ಮೇಲೆ ಹೇಳಿದ ಯೋಗ ಎಂಬ ಒಂದು ಪದವು ಒಳಗೊಳ್ಳುತ್ತದೆ. ಕೇವಲ ಒಬ್ಬ ಯಂತ್ರಕುಶಲಿಯಾಗಿ ನಿಲ್ಲಬೇಡ, ಒಬ್ಬ ರಚನಶೀಲ ಕಾರ್ಮಿಕನಾಗು, ಯೋಗಿಯಾಗು ಎಂದು ಗೀತೆಯು ಹೇಳುತ್ತದೆ(IV.40):

**ತಸ್ಮಾತ್ ಯೋಗೀ ಭವಾರ್ಜುನ |**

'ಆದ್ದರಿಂದ ಅರ್ಜುನನೇ ಯೋಗಿಯಾಗು.'

ನೀನು ಯಾರೇ ಆಗಿರು, ನಿನ್ನ ಕಾರ್ಯಕ್ಷೇತ್ರ ಯಾವುದೇ ಇರಲಿ- ರೈತ, ಕಾರ್ಖಾನೆಯ ಕಾರ್ಮಿಕ, ಆಡಳಿತಗಾರ,

ರಾಜಕಾರಣಿ, ಗೃಹಿಣಿ– ಯಾವುದೇ ಆಗಿರಲಿ, ಅದರಲ್ಲಿ ಯೋಗಿಯಾಗು ಎಂದು ಶ್ರೀಕೃಷ್ಣನು ಬುದ್ಧಿ ಹೇಳುತ್ತಾನೆ. ದೈಹಿಕ ಮತ್ತು ಮಾನಸಿಕ ಶಕ್ತಿಗಳೊಂದಿಗೆ ಅಂತರ್ಗತವಾಗಿರುವ ಆಧ್ಯಾತ್ಮಿಕ ಶಕ್ತಿ ಮೂಲಗಳನ್ನು ಕೂಡಿಸಿರಿ. ಆ ಕೂಡು ಶಕ್ತಿ ಜಾಲಕ್ಕೆ ಒಂದು ಮಾನವೀಯ ಒಲವನ್ನು ಕೊಡಿ, ಎಲ್ಲರ ಒಳಿತಿಗಾಗಿ ಕೆಲಸ ಮಾಡಿ. ಅದೇ ಚಾರಿತ್ರ್ಯ-ಪಟುತ್ವದ ಶಕ್ತಿ, ಮಾನವ ಶಕ್ತಿಯ ಅತ್ಯುತ್ತಮ ರೂಪ.

## ಗೃಹಸ್ಥನು ಪೌರನಾಗಿ ಬೆಳೆಯಬೇಕು

ಇಂದು ನಮ್ಮ ಎಲ್ಲಾ ಜನರಲ್ಲಿಯೂ ಉಂಟಾಗಬೇಕಾದ ಮಹತ್ತರವಾದ ಪರಿವರ್ತನೆ ಇದು: ಗೃಹಸ್ಥನು ಪೌರನಾಗಿ ಬೆಳೆಯಬೇಕಾದುದು. ಅದು ಇಪ್ಪತ್ತೊಂದನೆಯ ವಯಸ್ಸಿಗೆ ಬೆಳೆಯುವ ದೈಹಿಕ ಬೆಳವಣಿಗೆಯಲ್ಲ, ಸಂವಿಧಾನದ ತಿದ್ದುಪಡಿಯನ್ವಯ ಹದಿನೆಂಟನೆಯ ವರ್ಷಕ್ಕೆ ಬೆಳೆಯುವುದೂ ಅಲ್ಲ. ಅಥವಾ ಅದು ಕೇವಲ ಬೌದ್ಧಿಕ ಬೆಳವಣಿಗೆಯೂ ಅಲ್ಲ. ಏಕೆಂದರೆ ನಮ್ಮ ಎಲ್ಲ ದೇಶ–ವಿರೋಧೀ, ಸಮಾಜ–ವಿರೋಧೀ ಚಟುವಟಿಕೆಗಳಲ್ಲಿ ತೊಡಗಿರುವವರು ವಿದ್ಯಾವಂತರೆನಿಸಿಕೊಂಡವರೇ. ಪೌರತ್ವವು ಒಂದು ಆಧ್ಯಾತ್ಮಿಕ ಬೆಳವಣಿಗೆ. ಎಲ್ಲಾ ವಿಧವಾದ ಅಲ್ಪ, ಕ್ಷುಲ್ಲಕ, ಸ್ವಾರ್ಥ ಪ್ರವೃತ್ತಿಗಳನ್ನೂ ಚಟುವಟಿಕೆಗಳನ್ನೂ ಸೇವೆ ಮತ್ತು ಅರ್ಪಣೆಗಳಿಂದ ಗೆಲ್ಲುವುದರ ಮೂಲಕ ಪ್ರೇರಿತವಾಗುವ ಬೆಳವಣಿಗೆ. ಹೊರಗೆ ಸೇವಾಭಾವನೆಯಿಂದ ಮಾಡುವ ಎಲ್ಲಾ ಕೆಲಸಗಳು; ಒಳಗೆ ಪ್ರಕೃತಿ, ಮನುಷ್ಯ, ಸಕಲ ಚರಾಚರಗಳಲ್ಲಿಯೂ ಇರುವ ಭಗವಂತನ ಧ್ಯಾನ– ಇವು ಮಾನವನ ಆಧ್ಯಾತ್ಮಿಕ ವಿಕಾಸಕ್ಕೆ ಇರುವ ಅವಳಿ ಸಾಧನೆಗಳು. ಆದ್ದರಿಂದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ(8.7) ಹೇಳುತ್ತಾನೆ:

**ತಸ್ಮಾತ್ ಸರ್ವೇಷು ಕಾಲೇಷು**
**ಮಾಮನುಸ್ಮರ ಯುಧ್ಯ ಚ |**

'ಆದ್ದರಿಂದ ಎಲ್ಲಾ ಕಾಲಗಳಲ್ಲೂ ನನ್ನನ್ನು ಧ್ಯಾನಮಾಡು (ಮನಸ್ಸಿನಲ್ಲಿ) ಮತ್ತು ಜೀವನದ ಯುದ್ಧವನ್ನು ಮುಂದುವರಿಸು (ಹೊರಗೆ).' ಈ ರೀತಿ ಒಬ್ಬ ಗೃಹಸ್ಥನು ಪೌರನಾಗಿ ಬೆಳೆದಾಗ ಅವನು ರಾಜರ್ಷಿಯಾಗುತ್ತಾನೆ.

## ಬಲಿಷ್ಠ ರಾಷ್ಟ್ರದ ನಿರ್ಮಾಣ

ನಾವು ಸ್ಥಿರಗತಿಯಲ್ಲಿ ಬಲಿಷ್ಠವೂ ಆರೋಗ್ಯಯುತವೂ ಆದ ದೇಶವಾಗಿ ಮುನ್ನಡೆಯಬೇಕಾದ ಪಕ್ಷದಲ್ಲಿ ಪೌರತ್ವದ ಆಧುನಿಕ ಕಲ್ಪನೆಯಲ್ಲಿ ಅಡಗಿರುವ ಆಧ್ಯಾತ್ಮಿಕ ವಿಕಾಸವನ್ನು ನಾವು ಸಾಧಿಸಬೇಕು. ಗೃಹಸ್ಥರಾಗಿ ನಿಮ್ಮ ಆಸಕ್ತಿ ನಿಮ್ಮ ಕುಟುಂಬದ ವ್ಯಾಪ್ತಿಗೆ' ಸೀಮಿತವಾಗಿರುತ್ತದೆ. ಆದರೆ ಒಬ್ಬ ಪೌರನಾಗಿ ನಿಮ್ಮ ಆಸಕ್ತಿಯು ಸೀಮಿತ ಕುಟುಂಬವಲಯದಿಂದ ಆಚೆಗೆ ವಿಸ್ತರಿಸಿ ಮಾನವ ಜನಾಂಗದ ಹೆಚ್ಚು ಹೆಚ್ಚು ವ್ಯಾಪಕವಾದ ವಲಯಗಳನ್ನು, ಮಾನವನಿಗಿಂತ ಕೆಳಗಿನ ಜೀವಿಗಳನ್ನೂ ಒಳಗೊಳ್ಳುತ್ತದೆ. ಭಾರತದ ಒಬ್ಬ ಪೌರನಾಗಿ ನೀವು ಮಿಜೋರಾಂನಲ್ಲೋ, ಅರುಣಾಚಲ ಪ್ರದೇಶದಲ್ಲೋ, ಕಾಶ್ಮೀರ ಅಥವಾ ಲಕ್ಷದ್ವೀಪದಲ್ಲೋ ಇರುವ ಇನ್ನೊಬ್ಬ ಪೌರನಿಗೆ ಸಮನಾಗಿರುತ್ತೀರಿ. ಅವನು ನಿಮ್ಮದೇ ಧರ್ಮಕ್ಕೋ ಜಾತಿಗೋ ಜನಾಂಗಕ್ಕೋ ಲಿಂಗಕ್ಕೋ ಸೇರದೆ ಇರಬಹುದು, ಆದರೂ ಅವನು ನಿಮ್ಮಂತೆಯೇ ಪೌರನಾಗಿರುತ್ತಾನೆ. ಇದು ಪ್ರಜಾಸತ್ತಾತ್ಮಕ ಪೌರತ್ವದ ಅತಿ ಸುಂದರವಾದ ಸಮೃದ್ಧವಾದ ಮೌಲ್ಯವಾಗಿದೆ. ನಮ್ಮ ಜನರು ಇದನ್ನು ಮೈಗೂಡಿಸಿಕೊಂಡಾಗ ಆಡಳಿತದಲ್ಲಿ ಮತ್ತು ವ್ಯವಹಾರ ನಿರ್ವಹಣೆಯಲ್ಲಿ ಕಾರ್ಯಸಾಮರ್ಥ್ಯವುಂಟಾಗುತ್ತದೆ, ಅಂತರ ಮಾನವೀಯ ಹಾಗೂ ಅಂತರ– ವಂಗಡ ಸಂಬಂಧಗಳು ಸಂತೋಷಯುತವಾಗಿರುತ್ತವೆ. ಬಡತನ ಮತ್ತು ಹಿಂದುಳಿದಿರುವಿಕೆಗಳ ಸವಾಲನ್ನು ನಿಧಾನವಾಗಿ ಗೆಲ್ಲಲು ಸಾಧ್ಯವಾಗುತ್ತದೆ. ಅದು ನಮ್ಮ ದೇಶವನ್ನು ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವವೆಂಬ ನೆಲೆಯಿಂದ ಅತ್ಯಂತ ಶ್ರೇಷ್ಠವಾದ ಪ್ರಜಾಪ್ರಭುತ್ವ ಎಂಬ ನೆಲೆಗೆ ಪರಿವರ್ತಿಸುತ್ತದೆ. ಒಂದು ದೇಶವು ಶ್ರೇಷ್ಠವಾಗುವುದು ಅಲ್ಲಿಯ ಜನರು ವಿಶಾಲವಾದ ಮನಸ್ಸನ್ನೂ ಹೃದಯವನ್ನೂ ಹೊಂದುವುದರಿಂದ. ಉತ್ತಮಿಕೆಯ ಮಿಕ್ಕೆಲ್ಲ ಮಾನಗಳು ಹೊರವಲಯ, ಇದು ಮಾತ್ರ ಕೇಂದ್ರ.

ಒಂದು ದೇಶವು ಶ್ರೇಷ್ಠವಾಗುವುದು ಅಲ್ಲಿಯ ಜನರು ವಿಶಾಲವಾದ ಮನಸ್ಸನ್ನೂ ಹೃದಯವನ್ನೂ ಹೊಂದುವುದರಿಂದ. ಉತ್ತಮಿಕೆಯ ಮಿಕ್ಕೆಲ್ಲ ಮಾನಗಳು ಹೊರವಲಯ, ಇದು ಮಾತ್ರ ಕೇಂದ್ರ.